4

# ದೇವರ ದೇಶದ ವಾಗ್ದಾನ

“ದೇಶವು ಯಾವಾಗಲೂ ಅವರ ವಂಶಜರಿಗೆ ಒಳಪಟ್ಟಿರುವುದು ಎಂದು ದೇವರು ಅಬ್ರಹಾಮ, ಇಸಾಕ, ಮತ್ತು ಯಾಕೋಬರಿಗೆ ವಾಗ್ದಾನ ಮಾಡಲಿಲ್ಲವೋ?” ಎಂಬ ಪ್ರಶ್ನೆ ಉದಯವಾಗುತ್ತದೆ.

ಅಬ್ರಹಾಮ ಮತ್ತು ಸಂತತಿಯವರೊಂದಿಗೆ ದೇವರು ದೇಶದ ಬಗ್ಗೆ ಒಪ್ಪಂದ ಮಾಡಿಕೊಂಡದ್ದು ಮೊದಲು ನಮೂದಿಸಲ್ಪಟ್ಟದ್ದು ಅವನು ಕಲ್ದೀಯರ ಊರ್ ಎಂಬಲ್ಲಿಂದ ಪ್ರಯಾಣ ಮಾಡಿಸಲ್ಪಟ್ಟ ಸಮಯ ಹಾರಾನಿನಲ್ಲಿ ಇದ್ದು, ಅನಂತರ ಕಾನಾನಿನೊಳಗೆ (ಇಂದಿನ ಇಸ್ರಾಯೇಲು) ಬಂದನಂತರವಾಗಿದೆ. ಆ ಸಮಯದಲ್ಲಿ ದೇವರು ಅಬ್ರಹಾಮನಿಗೆ, “ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು” ಎಂದು ಹೇಳಿದನು (ಆದಿಕಾಂಡ 12:7ಬಿ).

ಅಬ್ರಹಾಮನು ದೇಶದಲ್ಲಿ ನೆಲೆಸಿದಾಗ, ದೇವರು ಅವನಿಗೆ ಹೀಗೆ ಹೇಳಿದನು. “ನೀನಿರುವ ಸ್ಥಳದಿಂದ ದಕ್ಷಣ, ಉತ್ತರ, ಪೂರ್ವ, ಪಶ್ಚಿಮಗಳ ಕಡೆಗೆ ಕಣ್ಣೆತ್ತಿ ನೋಡು. ನೀನು ನೋಡುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತವಾಗಿ ಕೊಡು ವೆನು” (ಆದಿಕಾಂಡ 13:14ಬಿ, 15; ನೋಡಿರಿ ಧರ್ಮೋಪದೇಶಕಾಂಡ 12:1), ಅನಂತರ ದೇವರು ವಾಗ್ದಾನವನ್ನು ಒಡಂಬಡಿಕೆಯ ರೂಪದಲ್ಲಿ ಮಾಡಿಕೊಂಡನು, ಅದರಲ್ಲಿ ಮೇರೆಯನ್ನು ನೇಮಿಸಿದನು. ಅರಣ್ಯಕಾಂಡ 34:2-12ರಲ್ಲಿ ಹೆಚ್ಚು ವಿವರವಾಗಿ ಮೇರೆ ಯನ್ನು ಮೋಶೆಯು ನೇಮಿಸಿದನು, ಅದು ಹತ್ತು ಕಾನಾನ್ಯ ಜನಾಂಗಗಳ ಕ್ಷೇತ್ರಗಳನ್ನು ಒಳಗೊಂಡಿತ್ತು: “ಆ ದಿನದಲ್ಲಿ ಯೆಹೋವನು ಅಬ್ರಾಮನ ಸಂಗಡ ಒಡಂಬಡಿಕೆ ಮಾಡಿಕೊಂಡು - ಐಗುಪ್ತ ದೇಶದ ನದಿಯಿಂದ ಯೂಫ್ರೇಟೀಸ್ ಮಹಾನದಿಯವರೆಗೂ ‘ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ ಅಂದನು’ ” (ಆದಿಕಾಂಡ 15:18). “ಸೊಲೊಮೋನನು ಯೂಫ್ರೇಟೀಸ್ ನದಿ ಮೊದಲುಗೊಂಡು ಫಿಲಿಷ್ಟಿಯರ ಮತ್ತು ಐಗುಪ್ತ್ಯರ ದೇಶಗಳವರೆಗೂ ಇರುವ ಎಲ್ಲಾ ರಾಜ್ಯಗಳವರನ್ನು ಆಳುತ್ತಿದ್ದನು” (1 ಅರಸುಗಳು 4:21ಎ).

ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವು ಇಸಾಕನಿಗೆ (ಆದಿಕಾಂಡ 26:3, 4) ಮತ್ತು ಯಾಕೋಬನ ನಂತರ ಅವನ ಸಂತತಿಯವರಿಗೆ ಅದು ಕೊಡಲ್ಪಡುವದೆಂಬ ವಾಗ್ದಾನದೊಂದಿಗೆ ಯಾಕೋಬನಿಗೆ (ಆದಿಕಾಂಡ 28:13; 35:12) ಪುನಃ ಮಾಡಲ್ಪಟ್ಟಿತು. ವರ್ಷಗಳ ನಂತರ, ಅವರ ಸಂತತಿಯವರು ಐಗುಪ್ತನ್ನು ಬಿಟ್ಟನಂತರ ದೇವರು ದೇಶವನ್ನು ಇಸ್ರಾಯೇಲ್ಯರ ಜನಾಂಗಕ್ಕೆ ವಾಗ್ದಾನ ಮಾಡಿದನು (ವಿಮೋಚನ ಕಾಂಡ 6:4, 8).

ಯೆಹೋಶುವನ ನಾಯಕತ್ವದ ಮುಖಾಂತರ ಇಸ್ರಾಯೇಲ್ಯರು ದೇಶವನ್ನು ಗೆದ್ದುಕೊಂಡು ಅದರಲ್ಲಿ ನೆಲೆಸಿದರು. ಯೆಹೋಶುವನ ಕಾರ್ಯವು ಪೂರ್ತಿಗೊಂಡಾಗ, ದೇವರು ತನ್ನ ವಾಗ್ದಾನವನ್ನು ನೆರವೇರಿಸಿದನೆಂದು ನಾವು ಓದುತ್ತೇವೆ:

ಯೆಹೋವನು ಇಸ್ರಾಯೇಲ್ಯರ ಪೂರ್ವಿಕರಿಗೆ ಪ್ರಮಾಣ ಪೂರ್ವಕವಾಗಿ

> ವಾಗ್ದಾನ ಮಾಡಿದ ದೇಶವನ್ನು ಇಸ್ರಾಯೇಲ್ಯರಿಗೆ ಕೊಟ್ಟನು. ಅವರು ಅದನ್ನು ಸ್ವತಂತ್ರಿಸಿಕೊಂಡು ಅದರಲ್ಲಿ ವಾಸಮಾಡಿದರು (ಯೆಹೋಶುವ 21:43).

> "ನಿಮ್ಮ ದೇವರಾದ ಯೆಹೋವನು ನಿಮ್ಮ ವಿಷಯದಲ್ಲಿ ನುಡಿದ ಆಶೀರ್ವಚನಗಳಲ್ಲಿ ಒಂದೂ ವ್ಯರ್ಥವಾಗಲಿಲ್ಲ. ಎಲ್ಲವೂ ತಪ್ಪದೇ ನೆರವೇರಿದವೆಂಬದು ನಿಮಗೆ ಮಂದಟ್ಟಾಯಿತಲ್ಲಾ" (ಯೆಹೋಶುವ 23:14ಬಿ).

ದೇಶವು ಇಸ್ರಾಯೇಲ್ಯರಿಗೆ ಕೊಡಲ್ಪಟ್ಟಿದ್ದರೂ ಅವರು ಅದನ್ನು ಸ್ವೀಕರಿಸುವುದು ಮತ್ತು ಅದರಲ್ಲಿ ಉಳಿದುಕೊಳ್ಳುವುದು ಅವರು ದೇವರಿಗೂ ಆತನ ಆಜ್ಞೆಗಳಿಗೂ ಯೋಗ್ಯವಾದ ಗೌರವ ತೋರಿಸುವುದರ ಮೇಲೆ ಅವಲಂಭಿಸಿತ್ತು:

> "ನಾನು ಜೀವಮರಣಗಳನ್ನೂ ಆಶೀರ್ವಾದ ಶಾಪಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ; ಇದಕ್ಕೆ ಭೂಮ್ಯಾಕಾಶಗಳು ಸಾಕ್ಷಿಗಳಾಗಿರಲಿ. ಆದುದರಿಂದ ನೀವೂ ನಿಮ್ಮ ಸಂತತಿಯವರೂ ಬದುಕಿಕೊಳ್ಳುವಂತೆ ಜೀವವನ್ನೇ ಆದುಕೊಳ್ಳಿರಿ; ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ ಆತನ ಮಾತಿಗೆ ವಿಧೇಯರಾಗಿರಿ. ಆತನನ್ನು ಹೊಂದಿಕೊಂಡೇ ಇರಿ. ಯೆಹೋವನು ನಿಮ್ಮ ಪಿತೃಗಳಾದ ಅಬ್ರಹಾಮ್ ಇಸಾಕ್ ಯಾಕೋಬರಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನೀವು ಬದುಕಿಕೊಳ್ಳುವದಕ್ಕೂ ಬಹುಕಾಲ ಇರುವದಕ್ಕೂ ಆತನೇ ಆಧಾರ" (ಧರ್ಮೋಪದೇಶಕಾಂಡ 30:19, 20).

ಐಗುಪ್ತ ದೇಶದೊಳಗಿಂದ ಹೊರಗೆ ಬಂದ ಸಂತತಿಯವರಲ್ಲಿ - ದೇವರು ದೇಶವನ್ನು ವಾಗ್ದಾನ ಮಾಡಿದ ಸಂತತಿಯವರಲ್ಲಿ (ವಿಮೋಚನಕಾಂಡ 6:8; 12:25; ಧರ್ಮೋಪದೇಶಕಾಂಡ 9:23) - ಕೇವಲ ಇಬ್ಬರು ಮಾತ್ರ ದೇಶದ ಭಾಗವನ್ನು ಸ್ವೀಕರಿಸಿದರು (ಅರಣ್ಯಕಾಂಡ 32:9-12; ಧರ್ಮೋಪದೇಶಕಾಂಡ 1:35, 36; ಯೆಹೋಶುವ 5:6). ಅವರಿಗೆ ಮಾಡಬೇಕೆಂದು ದೇವರು ಆಜ್ಞಾಪಿಸಿದ್ದನ್ನು ಇಸ್ರಾಯೇಲ್ಯರು ಮಾಡದಿದ್ದರೆ, ಆಗ ದೇವರು ಇಸ್ರಾಯೇಲ್ಯರ ಮುಂದೆ ಹೊರಗೆ ಓಡಿಸಲ್ಪಡುವ ಜನಾಂಗಗಳಿಗೆ ದೇವರು ಮಾಡುವನೆಂದು ಯೋಜಿಸಿದ್ದನ್ನೇ ಇಸ್ರಾಯೇಲ್ಯರಿಗೆ ಮಾಡುವನು (ಅರಣ್ಯಕಾಂಡ 33:55, 56); ಆತನು ಅವರಿಂದ ದೇಶವನ್ನು ಹಿಂದೆಗೆದು ಕೊಳ್ಳುವನು.

ದೇಶವು ಶರತ್ತಿನ ಮೇಲೆ ಇಸ್ರಾಯೇಲ್ಯರದಾಗಿತ್ತು. ಆದಿಕಾಂಡ 13:15ರಲ್ಲಿ ದೇವರು, "ಅದನ್ನು ನಿನಗೂ ನಿನ್ನ ಸಂತತಿಯವರಿಗೂ ಸದಾಕಾಲಕ್ಕೂ ಕೊಡುವೆನು" ಎಂದು ಹೇಳಿದನು. ಹಾಗಿದ್ದರೂ "ಸದಾಕಾಲಕ್ಕೂ" ಎಂಬ ಮಾತು ಈ ವಾಗ್ದಾನದಲ್ಲಿ *olam* ಎಂಬ ಹಿಬ್ರೂ ಪದವಾಗಿದ್ದು, ಸತತವಾಗಿ ಎಂದರ್ಥಕೊಡುತ್ತದೆ ಆದರೆ "ಸದಾಕಾಲಕ್ಕೂ" ಎಂದರ್ಥವಾಗುವ ಅವಶ್ಯಕತೆ ಇರುವದಿಲ್ಲ. "ನಿನ್ನ ತರುವಾಯ ನಿನ್ನ ಸಂತತಿಗೆ ಈ ದೇಶವನ್ನು ಶಾಶ್ವತ ಸ್ವಾಸ್ತ್ಯವನ್ನಾಗಿ ಕೊಡುವೆನು" ಎಂಬ ಹೇಳಿಕೆಯಲ್ಲಿಯಂತೆ ಅದು "ಶಾಶ್ವತವಾಗಿ" ಎಂದೂ ಭಾಷಾಂತರಿಸಲ್ಪಟ್ಟಿದೆ (ಆದಿಕಾಂಡ 48:4ಬಿ; ನೋಡಿರಿ ವಿಮೋಚನಕಾಂಡ 32:13).

*Olam* ಎಂಬುದು "ಎಂದಿಗೂ - ತೀರದ" ಎಂದರ್ಥವನ್ನು ಅವಶ್ಯಕವಾಗಿ ಕೊಡುವದಿಲ್ಲ ಎಂಬುದನ್ನು ತೋರಿಸಲು ಈ ಕೆಲವು ಉದಾಹರಣೆಗಳು ಸಾಕಷ್ಟಾಗಿವೆ:

(1) ಜನರು "ಯಾವಾಗಲೂ" ಮೋಶೆಯಲ್ಲಿ ನಂಬಿಕೆಯಿಡುವರೆಂದು ದೇವರು ಹೇಳಿದನು (*olam;* ವಿಮೋಚನಕಾಂಡ 19:9). ಬೇಗನೇ ಅನಂತರ, ಮೋಶೆಯಲ್ಲಿ

ಅವರು ಭರವಸೆಯನ್ನು ಕಳೆದುಕೊಂಡರು ಮತ್ತು ಇನ್ನೊಬ್ಬ ನಾಯಕನನ್ನು ನೇಮಿಸಿ ಕೊಳ್ಳಲು ಬಯಸಿದರು (ಅರಣ್ಯಕಾಂಡ 14:4).

(2) ಇಬ್ರಿಯ ಸೇವಕನು ತನ್ನ ಯಜಮಾನನ ಬಗ್ಗೆ ಮೆಚ್ಚಿಕೆಯುಳ್ಳವನು "ಶಾಶ್ವತ ವಾಗಿ" ಅವನ ಸೇವೆ ಮಾಡುವನು (*olam*; ವಿಮೋಚನಕಾಂಡ 21:6). ಮರಣದ ನಂತರ ಗುಲಾಮನು ತನ್ನ ಯಜಮಾನನ ಸೇವೆ ಮಾಡಲಾರನು (ಯೋಬ 3:19).

(3) ಆರೋನನ ಮಕ್ಕಳ ಯಾಜಕತ್ವವು "ಶಾಶ್ವತವಾಗಿರಬೇಕಾಗಿತ್ತು" (*olam;* ವಿಮೋಚನಕಾಂಡ 40:15). ಯಾಜಕತ್ವವು ಬದಲಾಯಿಸಲ್ಪಟ್ಟಿತು ಎಂದು ಹೊಸ ಒಡಂಬಡಿಕೆ ಹೇಳುತ್ತದೆ (ಇಬ್ರಿಯ 7:12-14).

(4) ಯಾಜ್ಞಕ ದ್ರವ್ಯಗಳು "ಶಾಶ್ವತ"ವಾಗಿದ್ದವೆಂದು ಹೇಳಲ್ಪಟ್ಟಿದೆ (*olam;* ಯಾಜಕಕಾಂಡ 6:18). ಹಾಗಿದ್ದರೂ ಆ ಯಜ್ಞಗಳು ಇನ್ನೆಂದೂ ಮಾಡಲ್ಪಡುತ್ತಿರುವದಿಲ್ಲ. ಅವು "ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆ" ಆಗಿದ್ದವು (ನೋಡಿರಿ ಇಬ್ರಿಯ 10:1-4).

ಅನೇಕ ಇತರ ಉದಾಹರಣೆಗಳು ಕೊಡಲ್ಪಡಬಹುದು ಅವರು ದೇವರಿಗೆ ವಿಧೇಯರಾಗಿರುವವರೆಗೆ ದೇಶವು ಅವರದಾಗಿ ಮುಂದುವರಿಯುವದೆಂದು ವಾಗ್ದಾನ ಮಾಡಲ್ಪಟ್ಟಿತ್ತು. ಹಾಗಿದ್ದರೂ, ಅವರು ದೇವರಿಗೆ ಅವಿಧೇಯರಾಗುವರು ಮತ್ತು "ದೇಶ ದೊಳಗಿಂದ ಕಿತ್ತೊಗೆಯಲ್ಪಡುವರು" ಎಂದು ಮೋಶೆಯು ಇಸ್ರಾಯೇಲ್ಯರಿಗೆ ಹೇಳಿ ದನು (ಧರ್ಮೋಪದೇಶಕಾಂಡ 28:63ಬಿ).

ಒಡಂಬಡಿಕೆಯನ್ನು ಮುರಿಯುವದಕ್ಕಾಗಿ ಇಸ್ರಾಯೇಲ್ಯರನ್ನು ದಂಡಿಸುವುದಾಗಿ ದೇವರು ವಾಗ್ದಾನ ಮಾಡಿದ್ದರೂ, ಅವರನ್ನು ಸಂಪೂರ್ಣವಾಗಿ ನಾಶ ಮಾಡುವದಿಲ್ಲವೆಂದು ಆತನು ವಾಗ್ದಾನ ಮಾಡಿದನು. ನಾವು ಹೀಗೆ ಓದುತ್ತೇವೆ,

> "ಆದರೂ ಅವರು ಶತ್ರುಗಳ ದೇಶದಲ್ಲಿರುವಾಗಲೂ ನಾನು ಅವರನ್ನು ಬೇಡ ವೆನ್ನುವದಿಲ್ಲ, ತಾತ್ಸಾರ ಮಾಡುವದಿಲ್ಲ; ನಾನು ಅವರಿಗೆ ಮಾಡಿದ ವಾಗ್ದಾನ ವನ್ನು ಮೀರುವದಿಲ್ಲ; ಅವರನ್ನು ಇಲ್ಲತಂದೆ ಮಾಡುವದಿಲ್ಲ; ನಾನು ಅವರ ದೇವರಾದ ಯೆಹೋವನಲ್ಲವೇ, ಅವರ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ನೆನಪಿಗೆ ತಂದುಕೊಂಡು ಅವರಿಗೆ ಹಿತವನ್ನು ಮಾಡು ವೆನು. ನಾನು ಅವರಿಗೆ ದೇವರಾಗಿರಬೇಕೆಂದು ಅವರ ಪಿತೃಗಳನ್ನು ಎಲ್ಲಾ ಜನಾಂಗಗಳ ಎದುರಿನಲ್ಲಿಯೇ ಐಗುಪ್ತ ದೇಶದೊಳಗಿಂದ ಬರಮಾಡಿದನಲ್ಲವೇ ನಾನು ಯೆಹೋವನು" (ಯಾಜಕಕಾಂಡ 26:44, 45).

ಇದು ಯಾಕೆ ಸಂಭವಿಸಲ್ಪಟ್ಟಿತು ಎಂಬುದರ ಬಗ್ಗೆ ಜನಾಂಗಗಳು ಆಶ್ಚರ್ಯ ಪಡುವವು ಎಂದು ದೇವರು ಮುಂತಿಳಿಸಿದನು:

> "ಯೆಹೋವನು ಈ ದೇಶಕ್ಕೆ ಹೀಗೆ ಮಾಡಿದ್ದೇಕೆ? ಇಂಥ ಕೋಪಾಗ್ನಿಗೆ ಕಾರಣವೇನಿದ್ದೀತು? ಎಂಬುದಾಗಿ ವಿಚಾರಿಸುವರು. ಅದಕ್ಕೆ ಜನರು - ಈ ದೇಶದವರ ಪಿತೃಗಳ ದೇವರಾದ ಯೆಹೋವನು ಅವರನ್ನು ಐಗುಪ್ತದೇಶದಿಂದ ಬಿಡಿಸಿ ಅವರೊಡನೆ ಮಾಡಿದ ನಿಬಂಧನೆಯನ್ನು ಅವರು ಉಲ್ಲಂಘಿಸಿದ್ದರಿಂದ … ಎಂದು ಹೇಳಿದನು" (ಧರ್ಮೋಪದೇಶಕಾಂಡ 29:24, 25).

ಒಡಂಬಡಿಕೆಯ ಒಪ್ಪಂದಗಳಿಗನುಸಾರವಾಗಿ ದೇವರು ಇಸ್ರಾಯೇಲಿಗೆ ವಿರುದ್ಧ

ವಾಗಿ ವರ್ತಿಸಿದನು; ಆತನು ಅವರನ್ನು ದಂಡಿಸಿದನು. ದೇವರ ಎಚ್ಚರಿಕೆಗಳಿದ್ದರೂ, ಈ ಶಿಕ್ಷೆಯು ಇಸ್ರಾಯೇಲನ್ನು ಆತನ ಬಳಿಗೆ ಹಿಂದಿರುಗಿ ತರಲಿಲ್ಲ. ದೇವರು ಹೀಗೆ ಹೇಳಿ, ಯೆರಮೀಯನೊಂದಿಗೆ ಮಾತಾಡಿದನು,

> ಅವರಾದರೋ ಕೇಳಲಿಲ್ಲ, ಕಿವಿಕೊಡಲಿಲ್ಲ, ಪ್ರತಿಯೊಬ್ಬನೂ ತನ್ನ ತನ್ನ ದುಷ್ಟಹೃದಯದ ಹಟಕ್ಕೆ ತಕ್ಕಹಾಗೆ ನಡೆದನು; ಆದಕಾರಣ ಕೈಕೊಳ್ಳ ಬೇಕೆಂದು ನಾನು ಆಜ್ಞಾಪಿಸಿದರೂ ಅವರು ಕೈಕೊಳ್ಳದ ಈ ನಿಬಂಧನೆಯ ಶಾಪಗಳನ್ನೆಲ್ಲಾ ಅದರ ಮೇಲೆ ಬರ ಮಾಡಿದೆನು. ... ನನ್ನ ಮಾತುಗಳನ್ನು ಕೇಳಲೊಲ್ಲದಿದ್ದ ತಮ್ಮ ಮೂಲ ಪಿತೃಗಳ ದುಷ್ಕೃತ್ಯಗಳ ಕಡೆಗೆ ತಿರುಗಿಕೊಂಡು ಅನ್ಯದೇವತೆಗಳನ್ನು ಹಿಂಬಾಲಿಸಿ ಸೇವಿಸಿದ್ದಾರೆ, ಇಸ್ರಾಯೇಲ್ ವಂಶದವರೂ ಯೆಹೂದ ವಂಶದವರೂ ನಾನು ಅದರ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಮೀರಿದ್ದಾರೆ. ಆದಕಾರಣ ಯೆಹೋವನೆಂಬ ನಾನು ಹೀಗ ನ್ನುತ್ತೇನೆ - ಇಗೋ, ಅವರು ತಪ್ಪಿಸಿಕೊಳ್ಳಲಾರದ ಕೇಡನ್ನು ಅವರ ಮೇಲೆ ಬರಮಾಡುವೆನು; ನನಗೆ ಮೊರೆಯಿಟ್ಟರೂ ಕೇಳೆನು (ಯೆರೆಮೀಯ 11:8-11).

ದೇವರು ತನ್ನ ಜನಾಂಗದ ಅಂತಿಮ ಆಶ್ರಯವಾಗಿರುವ ಯೆರೂಸಲೇಮಿನ ನಾಶನವನ್ನು ತಂದಾಗ ಈ ಕೆಳಗಿನದು ಸಂಭವಿಸುವುದು: "ಅನೇಕ ಜನಾಂಗಗ ಳವರು ಈ ಪಟ್ಟಣದ ಮಾರ್ಗವಾಗಿ ಹೋಗುತ್ತಾ, 'ಯೆಹೋವನು ಈ ಮಹಾಪಟ್ಟಣಕ್ಕೆ ಹೀಗೆ ಏಕೆ ಮಾಡಿದ' ಎಂದು ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ, 'ಈ ಪಟ್ಟಣದವರು ತಮ್ಮ ದೇವರಾದ ಯೆಹೋವನ ಒಡಂಬಡಿಕೆಯನ್ನು ನಿರಾಕರಿಸಿ ಅನ್ಯ ದೇವತೆಗಳನ್ನು ಪೂಜಿಸಿ ಸೇವಿಸಿದ್ದರಿಂದಲೇ ಇದಕ್ಕೆ ಈ ಗತಿಯಾಯಿತು, ಎಂದು ಉತ್ತರ ಕೊಡುವರು' " (ಯೆರೆಮೀಯ 22:8, 9).

ಇಸ್ರಾಯೇಲ್ಯರು ಇತರ ಜನಾಂಗಗಳಿಗೆ ವಸ್ತು ಪಾಠವಾದರು. ದೇವರಿಗೆ ವಿಧೇಯ ರಾಗದೇ ಒಡಂಬಡಿಕೆಯನ್ನು ಮುರಿದದ್ದರಿಂದ, ಅವರು ದೇವರು ತಮಗೆ ವಾಗ್ದಾನ ಮಾಡಿದ ಆಶೀರ್ವಾದಗಳನ್ನು ಕಳೆದು ಕೊಂಡರು.

© 2009 Truth for Today